# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 125 |
| ಸದಸ್ಯರ ಹೆಸರು | : | ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 04.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿರವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠವು ಕೆರೆಯಂಗಳದ ಸುತ್ತಮುತ್ತ ಮತ್ತು ರಾಜಕಾಲುವೆಯ ಬಳಿ ಕಟ್ಟಡ ಇನ್ನಿತರ ಕಾಮಗಾರಿ ನಿರ್ಮಾಣ ಮಾಡುವುದಕ್ಕೆ ನಿರ್ಬಂಧ ವಿಧಿಸಿ (ಬಫರ್ ಝೋನ್) ಆದೇಶ ಹೊರಡಿಸಿರುವುದು ನಿಜವೆ; | ಹೌದು. |
| ಆ | ಹಾಗಿದ್ದಲ್ಲಿ, ಆದೇಶ ನೀಡಿದ್ದು ಯಾವಾಗ (ಆದೇಶದ ಪೂರ್ಣ ಮಾಹಿತಿ ನೀಡುವುದು) | ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು OA No. 222/2014 ರಲ್ಲಿ ದಿನಾಂಕ: 04.05.2016 ರಂದು ನೀಡಿರುವ ತೀರ್ಪಿನಲ್ಲಿ ಕೆರೆಗಳ ಸುತ್ತಮುತ್ತಲಿನ ಹಾಗೂ ರಾಜಕಾಲುವೆಗಳ ಅಂಚಿನಿಂದ ಬಫರ್ ಝೋನ್ ಅನ್ನು ಈ ಕೆಳಕಂಡಂತೆ ನಿಗಧಿಪಡಿಸಿರುತ್ತದೆ.<br>1. In case of Lakes, 75m from the periphery of water body to be maintained as green belt and buffer zone for all the existing water bodies i.e., lakes / wetlands.<br>2. 50m from the edge of the primary Rajakaluves.<br>3. 35m from the edges in the case of secondary Rajakaluves.<br>4. 25m from the edges in the case of tertiary Rajakaluves. |
| ಇ | ಆದೇಶವನ್ನು ಪಾಲನೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಈ ಕುರಿತು ಹೊರಡಿಸಿರುವ ಆದೇಶದ ಪ್ರತಿ ಒದಗಿಸುವುದು) | ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಆದೇಶವನ್ನು ಪಾಲಿಸಲು ಸರ್ಕಾರವು ದಿನಾಂಕ: 17.05.2016 ರಂದು ನಿರ್ದೇಶಿಸಿತ್ತು. ಆದರೆ ಸರ್ಕಾರ ಮತ್ತು ಇತರೆ ಸಂಸ್ಥೆಗಳು ಸದರಿ ನಿರ್ದೇಶನಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿ.ಎ. 5016/2016, ದಿನಾಂಕ 05.03.2019 ರಂದು |

| | | |
|---|---|---|
| | | ನೀಡಿರುವ ಆದೇಶದಲ್ಲಿ ಮಾನ್ಯ ಹಸಿರು ನ್ಯಾಯ ಮಂಡಳಿಯ OA No. 222/2014, ದಿನಾಂಕ: 04.05.2016 ರ ಆದೇಶಗಳನ್ನು ವಜಾಗೊಳಿಸಿ RMP-2015 ವಲಯ ನಿಯಮಾವಳಿಯಂತೆ ಕೆರೆ ಮತ್ತು ನಾಲಾಗಳಿಗೆ ಬಫರ್‌ನ್ನು ಕಾಯ್ದಿರಿಸಬೇಕೆಂದು ಆದೇಶಿಸಿರುತ್ತದೆ.<br><br>ಅದರಂತೆ, ಸರ್ಕಾರದ ಪತ್ರ ಸಂಖ್ಯೆ: ನಅಇ 536 ಬೆಂಭೂಸ್ವಾ 2017, ದಿನಾಂಕ: 16.03.2019 ರನ್ವಯ ನಿಯಮಾನುಸಾರ ಕ್ರಮವಹಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗೆ ತಿಳಿಸಲಾಗಿದೆ. |
| ಈ | ಬಫರ್ ಝೋನ್ ವ್ಯಾಪ್ತಿಯಲ್ಲಿ ಮನೆ ನಿವೇಶನ ಖರೀಧಿ ಮಾಡಿರುವವರಿಗೆ ಎನ್.ಜಿ.ಟಿ. ಆದೇಶದಿಂದ ತುಂಬ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅವರ ಹಿತವನ್ನು ಕಾಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿವೆ (ಮಾಹಿತಿ ನೀಡುವುದು) | ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಆದೇಶವನ್ನು ವಜಾಗೊಳಿಸಿರುವುದರಿಂದ, ಅದರಂತೆ, ಕ್ರಮ ಜರುಗಿಸಲಾಗುತ್ತಿದೆ. |

ಸಂಖ್ಯೆ: ನಅಇ 07 ಬೆಂಭೂಸ್ವಾ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ